ಸದನದಲ್ಲಿ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತಮೂರನೆಯ ಅಧಿವೇಶನ
ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆ ಪ್ರಕರಣಗಳ ಬಗ್ಗೆ

ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು) -

72(475) ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಬೆಂಗಳೂರು ಡಿ.ಜೆ. ಹಳ್ಳಿ ಮತ್ತು ಕೆ.ಜಿ ಹಳ್ಳಿ ಗಲಭೆ ಪ್ರಕರಣಗಳನ್ನು NIA ಮತ್ತು CCB ಎರಡು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವ ಹಿನ್ನಲೆಯಲ್ಲಿ ಎರಡು ತನಿಖಾ ಸಂಸ್ಥೆಗಳಿಂದ ಈವರೆಗೂ ಎಷ್ಟು FIR ಗಳು ದಾಖಲಾಗಿದೆ; ಅದರಂತೆ ಎಷ್ಟು ಜನರನ್ನು ಬಂಧಿಸಲಾಗಿದೆ;

(ಆ) ಪ್ರಕರಣದ ಬಂಧಿತರಲ್ಲಿ ಈವರೆಗೂ ಎಷ್ಟು ಜನರನ್ನು ಅಮಾಯಕರೆಂದು ಬಿಡುಗಡೆ ಮಾಡಲಾಗಿದೆ;

(ಇ) ಗಲಭೆಯು ಪೂರ್ವ ನಿಯೋಜಿತವೇ; ಹೌದಾದ್ದಲ್ಲಿ, ಗುಪ್ತಚರ ಇಲಾಖೆಯಿಂದ ಒಳಾಡಳಿತ (ಗೃಹ) ಇಲಾಖೆಗೆ ಮಾಹಿತಿ ಇರಲಿಲ್ಲವೇ; ಇಲ್ಲದಿದ್ದಲ್ಲಿ ವೈಫಲ್ಯಕ್ಕೆ ಕಾರಣಗಳೇನು ;

(ಈ) ಗಲಭೆಯಿಂದ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಗೆ ನಷ್ಟ ಉಂಟಾಗಿರುವುದನ್ನು ಅಂದಾಜಿಸಲಾಗಿದೆಯೇ; ಅಂದಾಜಿಸಿದ್ದಲ್ಲಿ, ನಷ್ಟ ಭರಿಸುವ ಬಗ್ಗೆ ಸರ್ಕಾರವು ತಕ್ಷಣಕ್ಕೆ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ಒದಗಿಸುವುದು)